ಎಲ್.ಐ.ಸಿ. ಕಾಲೋನಿ ಬೈರಸಂದ್ರ ಬಸ್ ನಿಲ್ದಾಣ, ಜಯನಗರದ 3ನೇ ಬ್ಲಾಕ್ ಬಸ್ ನಿಲುಗಡೆ ಮತ್ತು ಜಯನಗರ ಸಾರ್ವಜನಿಕ ಆಸ್ಪತ್ರೆ ಬಸ್ ನಿಲುಗಡೆಗಳಿಂದ ಕಾಲ್ನಡಿಗೆಯ ಅಂತರದಲ್ಲಿದೆ. ಸದರಿ ಕಾಲೋನಿಯ ನಿವಾಸಿಗಳು ಮೇಲಿನ ಬಸ್ ನಿಲ್ದಾಣ-ಬಸ್ ನಿಲುಗಡೆಗಳಲ್ಲಿ ಬೆಂಗಳೂರು ಬಸ್ ನಿಲ್ದಾಣ ಶಿವಾಜಿನಗರ ಮತ್ತು ಕೃ.ರಾ. ಮಾರುಕಟ್ಟೆಗಳಿಗೆ ಸರಾಸರಿ ಪ್ರತಿ ಐದು ನಿಮಿಷಕ್ಕೊಂದರಂತೆ ಬಸ್ಸುಗಳ ಸೌಕರ್ಯ ಪಡೆಯಬಹುದಾಗಿದೆ. ಪ್ರಸಕ್ತ ಎಲ್.ಐ.ಸಿ. ಕಾಲೋನಿಯಿಂದ ಪ್ರಾರಂಭವಾಗುತ್ತಿರುವ ಮೇಲಿನ ಅನುಸೂಚಿಗಳ ಆಧಾಯವು ಕಾರ್ಯಾಚರಣೆಯ ವೆಚ್ಚಕ್ಕಿಂತ ತುಂಬಾ ಕಡಿಮೆ ಇರುವುದರಿಂದ ಈಗಾಗಲೇ ರದ್ದು ಪಡಿಸಲಾಗಿರುವ ಅನುಸೂಚಿಗಳನ್ನು ಪುನರಾರರಂಭಿಸುವುದು ಆರ್ಥಿಕ ದೃಷ್ಟಿಯಿಂದ ಸಮಂಜಸವೆನಿಸುವುದಿಲ್ಲ. ಎಲ್.ಐ.ಸಿ. ಕಾಲೋನಿಯಿಂದ ಪ್ರಾರಂಭವಾಗುವ ಎಲ್ಲ ಅನುಸೂಚಿಗಳನ್ನು ವೇಳೆಗೆ ಸರಿಯಾಗಿ ಕಾರ್ಯಾಚರಣೆಗೊಳಪಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

2. ರಾಷ್ಟ್ರೀಯ ಹೆದ್ದಾರಿ 4 ರಲ್ಲಿ ಇರುವ ಜಾಲಹಳ್ಳಿ ಕ್ರಾಸ್ ಮೂಲಕ ಬೆಂಗಳೂರು ಬಸ್ ನಿಲ್ದಾಣ, ಕೃ.ರಾ. ಮಾರುಕಟ್ಟೆ ಮತ್ತು ಶಿವಾಜಿನಗರಕ್ಕೆ ಬೆಂಗಳೂರು ನಗರ ಸಾರಿಗೆ ವಿಭಾಗದ 123 ಅನುಸೂಚಿಗಳು ಸಂಚಾರದಲ್ಲಿದ್ದು ಈ ಅನುಸೂಚಿಗಳು ಪ್ರಯಾಣಿಕರಿಗೆ ಪ್ರತಿದಿನ ಒಟ್ಟೂ 1238 ಏಕಮುಖ ಸುತ್ತುಗಳ ಸಾರಿಗೆ ಸೇವೆಯನ್ನು ಒದಗಿಸುತ್ತಿವೆ. ಜಾಲಹಳ್ಳಿ ಕ್ರಾಸ್ ಬಸ್ ನಿಲುಗಡೆಗೆ ಆಗಿಂದಾಗ್ಗೆ ಸಂಚಾರ ನಿಯಂತ್ರಕರನ್ನು ನಿಯೋಜಿಸಿ ಬಸ್ಸುಗಳು ಸದರಿ ನಿಲುಗಡೆಯಲ್ಲಿ ತಪ್ಪದೆ ನಿಂತು ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಮತ್ತು ಇಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಮಾರ್ಗಗಳಲ್ಲಿನ ಕಾರ್ಯನಿರತ ಚಾಲಕ ನಿರ್ವಾಹಕರಿಗೆ ಅಗತ್ಯವಾದ ಸೂಚನೆಯನ್ನು ನೀಡಲಾಗಿದೆ. ಇನ್ನು ಮುಂದೆಯೂ ಸಹ ಸದರಿ ಬಸ್ಸು ನಿಲುಗಡೆಗೆ ಸಂಚಾರ ನಿಯಂತ್ರಕರನ್ನು ನಿಯೋಜಿಸಿ ಅಲ್ಲಿ ಬಸ್ಸುಗಳನ್ನು ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಮತ್ತು ಇಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಜಾಲಹಳ್ಳಿ ಕ್ರಾಸ್‌ನಿಂದ ಬೆಂಗಳೂರು ಬಸ್ ನಿಲ್ದಾಣಕ್ಕೆ ಬೆಳಿಗ್ಗೆ 9-15 ಗಂಟೆಗೆ ಹಾಗೂ ಸಾಯಂಕಾಲ 5-30 ಗಂಟೆಗೆ ಪಿ.ಎಚ್.ಎಸ್. ಬಸ್ಸು ಸೌಕರ್ಯವನ್ನು ದಿನಾಂಕ 20-2-1997 ರಿಂದ ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಅ. 1992-93ನೇ ಸಾಲಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಸಮೂಹ 'ಎ' ಮತ್ತು 'ಬಿ' ವರ್ಗಗಳ ಪರೀಕ್ಷೆಗಳಲ್ಲಿ ನಡೆದ ಅವ್ಯವಹಾರ.

ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ):- ಮಾನ್ಯ ಸಭಾಧ್ಯಕ್ಷರೆ, 1992-93ನೇ ಸಾಲಿನ ಕರ್ನಾಟಕ ಲೋಕ ಸೇವಾ ಆಯೋಗ ರಚಿಸಿದ ಸಮೂಹ 'ಎ' ಮತ್ತು 'ಬಿ' ವರ್ಗದ ಹುದ್ದೆಗಳಿಗೆ ನಡೆಸಿದ ಪರೀಕ್ಷೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಸರ್ಕಾರದ ಗಮನಕ್ಕೆ ಬಂದಾಗ, ಸರ್ಕಾರ ಮರು ಮೌಲ್ಯ ಮಾಪನ ಮಾಡಲು ಆದೇಶಿಸಿದಂತೆ ಮರು ಮೌಲ್ಯ ಮಾಪನ ಮಾಡಿದಾಗಲೂ ಸಹ ಭ್ರಷ್ಟಾಚಾರ ನಡೆದು ಬಹಳಷ್ಟು ವಿದ್ಯಾರ್ಥಿಗಳ ಅಂಕಗಳು ಬದಲಾಗಿದ್ದು ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳದೆ, 'ಎ' ಮತ್ತು 'ಬಿ' ಹುದ್ದೆಗಳ ಪ್ರಕಟಿತ ಆಯ್ಕೆ ಪಟ್ಟಿ 20789697, ದಿನಾಂಕ

25.7.96ರ ಅರ್ಜಿಗಳು, ಈಗಿನ ಸರ್ಕಾರಿ ಆದೇಶ ಸಂಖ್ಯೆ ಎಸ್.ಡಬ್ಲ್ಯು.ಡಿ. 150 ಜೆಸಿ ಎನ್ 94 ದಿನಾಂಕ 25-7-96 ರಂತೆ ಹಿಂದುಳಿದ ವರ್ಗ ಒಂದಕ್ಕೆ ಶೇಕಡ 7, ಎರಡನೇ 'ಎ' ಶೇಕಡ 20, ಎರಡು 'ಬಿ' ಶೇಕಡ ಆರು, ಮೂರನೇ 'ಎ' ಶೇಕಡ 8, ಮೂರು 'ಬಿ' ಶೇಕಡ 11, ಶೇಕಡ 5 ಒಟ್ಟು ಶೇಕಡ 57 ಈ ರೀತಿ ಸರ್ಕಾರಿ ಆದೇಶದಂತೆ ಮೀಸಲಾತಿಯನ್ನು ಅನುಸರಿಸಿದೆ. ಹಾಗೂ ಈಗಿನ ಸರ್ಕಾರದ ಆದೇಶದಂತೆ ಮೀಸಲಾತಿಯನ್ನು ಉಲ್ಲಂಘಿಸಿರುವುದರಿಂದ ಈ ಕೂಡಲೇ ಪ್ರಕಟಿತ ಆಯ್ಕೆ ಪಟ್ಟಿಯನ್ನು ರದ್ದು ಪಡಿಸಿ ತಪ್ಪಿತಸ್ತ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು ಆಗಿನ ಸರ್ಕಾರಿ ಆದೇಶದಂತೆ ಮೀಸಲಾತಿಯನ್ನು ಅನುಸರಿಸಿ ಹೊಸ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ನ್ಯಾಯ ದೊರಕಿಸಿಕೊಡಬೇಕೆಂದು ಈ ಮೂಲಕ ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:- (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು). ಮುಖ್ಯಮಂತ್ರಿಗಳ ಪರವಾಗಿ:-

ಮಾನ್ಯ ಉಪಾಧ್ಯಕ್ಷರೆ,

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ 25-7-1996ರ ಅಧಿಸೂಚನೆಯಲ್ಲಿ, 1988-92ನೇ ಸಾಲಿನ, ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ತಂಡದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿತು. ಈ ಆಯ್ಕೆಗೆ ಸಂಬಂಧಿಸಿದಂತೆ ರಿಕ್ತ ಸ್ಥಾನಗಳನ್ನು ದಿನಾಂಕ 12-12-1986 ರ ಆದೇಶದಲ್ಲಿ ಪ್ರಕಟಿಸಲಾದ ಮೀಸಲಾತಿ ರೋಸ್ಟರಿನನುಸಾರ ವರ್ಗೀಕರಿಸಿ ಪ್ರಕಟಿಸಲಾಗಿತ್ತು. ರಿಕ್ತ ಸ್ಥಾನಗಳ ಪ್ರಕಟಿಯಾದ ನಂತರ, ನೇಮಕಾತಿ ಪ್ರಕ್ರಿಯೆಯು ಮುಗಿಯುವ ಮೊದಲೇ, ರಾಜ್ಯ ಮೀಸಲಾತಿ ನೀತಿಯಲ್ಲಿ ಬದಲಾವಣೆಯಾಯಿತು. ದಿನಾಂಕ 20-6-1995ರ ಆದೇಶದಲ್ಲಿ ಸರ್ಕಾರದ ಪರಿಷ್ಕೃತ ಮೀಸಲಾತಿ ನೀತಿಯನುಸಾರ ರೋಸ್ಟರನ್ನು ಹೊರಡಿಸಲಾಗಿದೆ. ಆದರೆ, ಸರ್ಕಾರದ ಪರಿಷ್ಕೃತ ಮೀಸಲಾತಿ ನೀತಿಯು, ನೇಮಕಾತಿ ಪ್ರಕ್ರಿಯೆ ಆರಂಭಗೊಂಡಿರುವ ಪ್ರಕರಣಗಳಿಗೆ ಅನ್ವಯಿಸುವುದು ಕಾನೂನುಬದ್ಧವಲ್ಲದೆ ಕಾರಣ, ಪರಿಷ್ಕೃತ ಮೀಸಲಾತಿ ನೀತಿಯನ್ನು ಅಂತಹ ಪ್ರಕರಣಗಳಿಗೆ ಅನ್ವಯಿಸುವಂತಿಲ್ಲ. ದಿನಾಂಕ 25-11-1995ರ ಆದೇಶದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನನುಸಾರ, ದಿನಾಂಕ 12-12-1986ರ ಆದೇಶಕ್ಕೆ ಮಾರ್ಪಾಡು ಮಾಡಿ, ಮೀಸಲಾತಿ ಪ್ರಮಾಣವನ್ನು ಶೇಕಡಾ 50ಕ್ಕೆ ಸೀಮಿತಗೊಳಿಸಲಾಗಿದೆ. ಆಯೋಗವು, ದಿನಾಂಕ 25-7-1996 ರಂದು ಪ್ರಕಟಿಸಿರುವ ಆಯ್ಕೆ ಪಟ್ಟಿಯು ದಿನಾಂಕ 25-11-1995ರ ಆದೇಶಕ್ಕೆ ಅನುಗುಣವಾಗಿದ್ದು, ಇದರಲ್ಲಿ ಮೀಸಲಾತಿ ನೀತಿಯ ಉಲ್ಲಂಘನೆಯಾಗಿಲ್ಲ.

ಈ ಆಯ್ಕೆಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಆಯೋಗದ ಕೆಲವು ಸೂಚನೆಗಳನ್ನು ಉಲ್ಲಂಘಿಸಿ ಮತ್ತು ಅಕ್ರಮವೆಸಗಿದ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳನ್ನು ಆಯೋಗವು ಮೌಲ್ಯ ಮಾಪನ ಮಾಡಿರಲಿಲ್ಲ. ಇನ್ನು ಕೆಲವು ಉತ್ತರ ಪತ್ರಿಕೆಗಳ ಮೌಲ್ಯ ಮಾಪನದಲ್ಲಿ ಪಕ್ಷಪಾತ: ಭ್ರಷ್ಟಾಚಾರದ ಅಪಾದನೆಗಳು ಸಾರ್ವಜನಿಕವಾಗಿ ಕೇಳಬಂದಿತ್ತು. ಆಯೋಗವು, ಉತ್ತರ ಮೌಲ್ಯಮಾಪನದಲ್ಲಿ ಅನುಸರಿಸಿದ ಕ್ರಮವನ್ನು ಹಲವಾರು ಆಬಾಧಿತ ಅಭ್ಯರ್ಥಿಗಳು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಶ್ನಿಸಿದ್ದರು. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಸಂಬಂಧಿಸಿದ ಎಲ್ಲಾ

ಅರ್ಜಿಗಳನ್ನು ದಿನಾಂಕ 3-4-1995ರ ಆದೇಶದಲ್ಲಿ ಇತ್ಯರ್ಥಗೊಳಿಸಿತ್ತು. ಆಯೋಗವು, ಆಡಳಿತ ನ್ಯಾಯ ಮಂಡಳಿಯ ದಿನಾಂಕ 3-4-1995ರ ಆದೇಶಾನುಸಾರ ಕ್ರಮ ಕೈಗೊಂಡಿದೆ. ಆಯೋಗದ ಈ ಕ್ರಮದಿಂದಾಗಿ ಅಂದರೆ, ಮರು ಮೌಲ್ಯಮಾಪನದಿಂದಾಗಿ ಅಬಾಧಿತ ವ್ಯಕ್ತಿಗಳು ಪುನಃ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದರು. ಆಡಳಿತ ನ್ಯಾಯ ಮಂಡಳಿಯು, ತನ್ನ ದಿನಾಂಕ 19-4-1996ರ ಆದೇಶದಲ್ಲಿ, ಈ ಎಲ್ಲಾ ಅರ್ಜಿಗಳನ್ನು ವಜಾ ಮಾಡುತ್ತಾ, ಮೊದಲಿನ ಮೌಲ್ಯಮಾಪನ ಸಮರ್ಪಕವಾಗಿರಲಿಲ್ಲವೆಂದು ನಿರ್ಧರಿಸಲಾದ ಕಾರಣ, ಮರು ಮೌಲ್ಯಮಾಪನ ಮಾಡಲಾಗಿರುವುದರಿಂದ, ಈ ಮರು ಮೌಲ್ಯಮಾಪನದಲ್ಲಿ ಯಾವುದೇ ತರಹದ ಕುಂದಿಲ್ಲವೆಂದು ಹೇಳಿದೆ. ಆಡಳಿತ ನ್ಯಾಯ ಮಂಡಳಿಯ ಈ ಆದೇಶದ ವಿರುದ್ಧ ಕೆಲವು ಅರ್ಜಿದಾರರುಗಳು ಸಲ್ಲಿಸಿದ್ದ ವಿಶೇಷ ಮೇಲ್ಮನವಿಗಳು ಸಂಖ್ಯೆ 12181-86:96 ನ್ನು ಸರ್ವೋಚ್ಚನ್ಯಾಯಾಲಯವು ತನ್ನ ದಿನಾಂಕ 19-4-1996ರ ಆದೇಶದಲ್ಲಿ ವಜಾ ಮಾಡಿದೆ. ಈ ಎರಡನೇ ತಂಡದ ದಾವೆಗಳು ಇತ್ಯರ್ಥಗೊಂಡ ನಂತರ ಆಯೋಗವು ಆಯ್ಕೆ ಪಟ್ಟಿಯನ್ನು ಪ್ರಕಟಿಸಿದೆ. ಈ ಆಯ್ಕೆ ಸಂಬಂಧದಲ್ಲಿ ವ್ಯಕ್ತಿಗತ ಹಕ್ಕು ಸಾಧಿಸಿದ ಇನ್ನೂ ಕೆಲವು ಅರ್ಜಿಗಳು ಆಡಳಿತ ನ್ಯಾಯ ಮಂಡಳಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ.

ರಾಜ್ಯ ಲೋಕಸೇವಾ ಆಯೋಗವು ಒಂದು ಸಂವಿಧಾನದಡಿಯಲ್ಲಿ ರೂಪಗೊಂಡ ಸ್ವತಂತ್ರ ಸಂಸ್ಥೆಯಾಗಿದ್ದು, ನೇಮಕಾತಿ ಪರೀಕ್ಷೆಗಳನ್ನು ನಡೆಸುವುದು ಅದರ ಜವಾಬ್ದಾರಿಯಾಗಿರುವುದರಿಂದ, ಆಯೋಗದ ದೈನಂದಿನ ಕಾರ್ಯನಿರ್ವಹಣೆಯಲ್ಲಿ ಸರ್ಕಾರವು ಹಸ್ತಕ್ಷೇಪ ಮಾಡುವಂತಿಲ್ಲ. ಆದ್ದರಿಂದ, ಸ್ಪರ್ಧಾತ್ಮಕ ಪರೀಕ್ಷೆ ಸಂಬಂಧದ ಆಯೋಗದ ವಿರುದ್ಧದ ದೂರಿನಲ್ಲಿಯೂ ಸರ್ಕಾರ ಮಧ್ಯೆ ಪ್ರವೇಶಿಸಿಲ್ಲ. ಆಯೋಗದ ಕ್ರಮದಿಂದ ಅಬಾಧಿತ ಅಭ್ಯರ್ಥಿಗಳು ಆಡಳಿತ ನ್ಯಾಯ ಮಂಡಳಿಯ ಮುಖಾಂತರ ತಮ್ಮ ಕುಂದುಕೊರತೆಯನ್ನು ಬಗೆಹರಿಸಿಕೊಂಡಿರುತ್ತಾರೆ. ಹಾಗೂ ಬಗೆಹರಿಸಿಕೊಳ್ಳಲು ಅವಕಾಶವಿರುತ್ತದೆ. ವಿಷಯ ನ್ಯಾಯಾಲಯದಲ್ಲಿ ಇತ್ಯರ್ಥವಾದ ನಂತರ ಅಂತಿಮಗೊಂಡಿರುತ್ತದೆ.

ಇ. ಕಂದಾಯ ಬಡಾವಣೆಗಳಲ್ಲಿ ನಿರ್ಮಿಸಿರುವ ಮನೆಗಳಿಗೆ ರಿಜಿಸ್ಟ್ರೇಶನ್ ಆಗದೇ ಇರುವುದು.

ಶ್ರೀ ಯು.ಆರ್. ಸಭಾಪತಿ (ಉಡುಪಿ ಕ್ಷೇತ್ರ):- ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಇತ್ತೀಚೆಗೆ ಸೇರಿಸಿದ ಕೆಲವು ಕಂದಾಯ ಬಡಾವಣೆಗಳಲ್ಲಿ ನಿರ್ಮಿಸಿರುವ ಮನೆಗಳಿಗೆ ಮಹಾನಗರ ಪಾಲಿಕೆಯು ಮನೆಯ ಮಾಲೀಕರು ಜಿ.ಪಿ.ಎ. ಹೋಲ್ಡರ್ ಆಗಿದ್ದರೂ ಸಹ 15,000 ಬಡಾವಣೆ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು ಅವರ ಹೆಸರಿಗೆ ಖಾತೆ ಮತ್ತು ಕಂದಾಯವನ್ನು ಮಾಡಿಕೊಡುತ್ತಿರುವುದರಿಂದ ಸದರಿ ಮನೆ ಅಥವಾ ನಿವೇಶನ ಮಾಲೀಕರುಗಳು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಈ ಮನೆ ಅಥವಾ ನಿವೇಶನವನ್ನು ರಿಜಿಸ್ಟರ್ ಮಾಡಿಸಿಕೊಳ್ಳುವ ಅವಶ್ಯಕತೆ ಇಲ್ಲದೇ ಇರುವುದರಿಂದ ರಿಜಿಸ್ಟ್ರೇಷನ್ ಶುಲ್ಕದ ಮೂಲಕ ಸರ್ಕಾರಕ್ಕೆ ಬರಬೇಕಾಗಿದ್ದ ಕೋಟ್ಯಾಂತರ ರೂ. ಹಣ ನಷ್ಟವಾಗುತ್ತಿದೆ? ಇದಕ್ಕೆ ಸರ್ಕಾರ ರಿಜಿಸ್ಟ್ರೇಷನ್ ಮಾಡುವುದನ್ನು ನಿಲ್ಲಿಸಿರುವುದು ಮೂಲ ಕಾರಣವಾಗಿದೆ.